# ಹೊಳೆನರಸೀಪುರದ ಜೆ.ಎಂ.ಎಫ್.ಸಿ., ರವರ ನ್ಯಾಯಾಲಯದಲ್ಲಿ.

**ಸಿ.ಸಿ.ನಂಃ 642/18**

| | | |
|---|---|---|
| **ಸಾಕ್ಷಿಯ ಹೆಸರು** | ಃ ವಿಜಯಾ | ಸಿ.ಡಬ್ಲ್ಯೂ ಃ 1 |
| ಗಂಡನ ಹೆಸರು | ಃ ರವಿಕುಮಾರ | ಪಿ.ಡಬ್ಲ್ಯೂ ಃ 1 |
| ವಯಸ್ಸು | ಃ 38 ವರ್ಷ | ಪ್ರಮಾಣೀಕರಿಸಿದ ತಾಃ 27.02.2020 |
| ವೃತ್ತಿ | ಃ ಉಪಮಹಾನಗರ ಆಯುಕ್ತರು, ಬಿ.ಎಂ.ಆರ್.ಡಿ. ಬೆಂಗಳೂರು, | |
| ವಾಸ | ಃ ಬೆಂಗಳೂರು. | |

**ಮುಖ್ಯ ವಿಚಾರಣೆಃ- ಮಾನ್ಯ ಎ.ಪಿ.ಪಿ ಯವರಿಂದ**

ನಾನು 2015 ರಿಂದ 2016 ರವರೆಗೆ ಹಾಸನದ ಉಪವಿಭಾಗದಲ್ಲಿ ಸಹಾಯಕ ಉಪ ಆಯುಕ್ತರಾಗಿ ಕರ್ತವ್ಯ ಮಾಡಿದ್ದೇನೆ.

ದಿನಾಂಕ 02.04.2016 ರಂದು ಹೊಳೆನರಸೀಪುರ ತಾ, ಹಳೇಕೋಟೆ ಹೋ, ಸಿಗರನಹಳ್ಳಿ ಗ್ರಾಮದಲ್ಲಿ ಜಾತ್ರೆ ಇತ್ತು. ಅದರ ಮುಂಜಾಗ್ರತಾ ಕ್ರಮವಾಗಿ ದಿಃ 01.04.2016 ರಂದು ಪರಿಶೀಲನೆ ಮಾಡಲೆಂದು ಸಿಗರನಹಳ್ಳಿ ಗ್ರಾಮಕ್ಕೆ ಹೋಗಿದ್ದೆನು. ಆ ಸಮಯದಲ್ಲಿ ಎಸ್.ಸಿ. ಜನಾಂಗ ಮತ್ತು ಗೌಡ ಜನಾಂಗದ ನಡುವೆ ಮೊದಲೇ ಸಂಘರ್ಷ ಇತ್ತು. ಎಸ್.ಸಿ. ಜನಾಂಗದವರನ್ನು ದೇವಸ್ಥಾನದ ಒಳಗೆ ಹೋಗಲು ಅನುಮತಿ ನೀಡಿದೆವು. ಇದರಿಂದ ಒಕ್ಕಲಿಗ ಜನಾಂಗದ ಗುಂಪಿನವರು ನೀವು ಎಸ್.ಸಿ. ಜನಾಂಗದವರನ್ನು ದೇವಸ್ಥಾನದ ಒಳಗೆ ಹೋಗಲು ಅನುಮತಿ ನೀಡಿರುವುದರಿಂದ ಇನ್ನು 6 ತಿಂಗಳು ನಾವು ಜಾತ್ರೆ ಮಾಡಲು ಸಾಧ್ಯವಿಲ್ಲ ಎಂದು ನಮ್ಮ ಉದ್ದೇಶಿಸಿ ಕೆಟ್ಟ ಕೆಟ್ಟ ಶಬ್ದಗಳಿಂದ ಬೈಯಲು ಪ್ರಾರಂಭಿಸಿದರು. ಆಗ ಸಮಯ 12.30 ಆಗಿತ್ತು. ಕೂಡಲೇ ಪೊಲೀಸರನ್ನು ಸ್ಥಳಕ್ಕೆ ಕರೆಸಿದೆನು. ನಮ್ಮಗಳ ಮೇಲೆ ಕಲ್ಲುಗಳನ್ನು ಎಸೆದರು. ನಮ್ಮ ವಾಹನದ ಚಾಲಕ ಶಿವಣ್ಣ ಎಂಬುವವರು ನನ್ನ ಹೈ ಪ್ಯಾಡ್ ನ್ನು ತೆಗೆದುಕೊಂಡು ಆ ದೃಶ್ಯವನ್ನು ವಿಡಿಯೋ ಮಾಡುತ್ತಿದ್ದರು. ಶಿವಣ್ಣರವರಿಗೆ ಸ್ಥಳದಲ್ಲಿದ್ದ ಒಂದು ಗುಂಪಿನವರು ನನ್ನ ಹೈ ಪ್ಯಾಡ್ ನ್ನು ಕಿತ್ತುಕೊಂಡು ಚಚ್ಚಿ ಹಾಕಿದರು ಮತ್ತು ಶಿವಣ್ಣನವರಿಗೂ ಆ ಗುಂಪಿನವರು ಹಲ್ಲೆ ಮಾಡಿದರು. ಗುಂಪಿನವರು ನನ್ನನ್ನು ಉದ್ದೇಶಿಸಿ ಅವಾಚ್ಯ ಶಬ್ದಗಳಿಂದ ಬೈಯುತ್ತಾ ಇದ್ದರು. ಗುಂಪಿನಲ್ಲಿದ್ದ ಮಹಿಳಾ ಸದಸ್ಯರ ಹೆಸರು ನನಗೆ ಗೊತ್ತಿದೆ. ತಾಯಮ್ಮ, ತಂಗ್ಯಮ್ಮ, ಗಾಯತ್ರಿ, ಪ್ರೇಮಾ, ಕೃಷ್ಣೇಗೌಡ, ರಾಜೇಗೌಡ ಮತ್ತು ತಿಮ್ಮೇಗೌಡ ಆ ಗುಂಪಿನಲ್ಲಿ ಇದ್ದರು. ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನಾನು ಈಗ ಹೆಸರಿನಿಂದ ಗುರುತಿಸಲು ಆಗುವುದಿಲ್ಲ. ಆ ದಿನದ ಘಟನೆಯಿಂದ ನನಗೆ ಕಲ್ಲಿನಿಂದ ಪೆಟ್ಟಾಗಿರುತ್ತದೆ. ನನ್ನ 25 ಸಾವಿರದ ಹೈ ಪ್ಯಾಡ್ ಹಾಳಾಗಿರುತ್ತದೆ. ನನಗೆ ಮಾನಸಿಕ ಹಿಂಸೆ ಆಯಿತು. ನನ್ನ ಸರ್ಕಾರಿ ಕರ್ತವ್ಯವನ್ನು ನಿರ್ವಹಿಸಲು ತೊಂದರೆ ಆಯಿತು. ನಾನು ಘಟನೆಯ ಕುರಿತಾಗಿ ಪೊಲೀಸರಿಗೆ ದೂರನ್ನು ಕೊಟ್ಟಿದ್ದೇನೆ. ಸದರಿ ದೂರನ್ನು ಈಗ ನೋಡುತ್ತಿದ್ದು ನಿ.ಪಿ. 1 ಸಾಕ್ಷಿಯ ಸಹಿಯನ್ನು ನಿ.ಪಿ. 1 ಎ ಎಂದು ಗುರುತಿಸಿಕೊಳ್ಳಲಾಯಿತು. ಘಟನೆಯ

ಬಗ್ಗೆ ಪೊಲೀಸರ ಬಳಿ ನಾನು ಮರು ಹೇಳಿಕೆ ನೀಡಿದ್ದೇನೆ. ನ್ಯಾಯಾಲಯದ ಮುಂದಿರುವ 9 ಕಾಡು ಜಾತಿಯ ಕಲ್ಲುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಮು.ಮಾ 1 ರಿಂದ 9 ಎಂದು ಗುರುತಿಸಿಕೊಳ್ಳಲಾಯಿತು. ಒಂದು ಸೀಲು ಮಾಡಿರುವ ಲಕೋಟೆ ನ್ಯಾಯಾಲಯದ ಮುಂದೆ ಇದ್ದು ಮುಕ್ತ ನ್ಯಾಯಾಲಯದಲ್ಲಿ ಅದನ್ನು ತೆರೆಯಲು ಆದೇಶಿಸಿದ್ದು ಆ ಲಕೋಟೆಯೊಳಗಿದ್ದ ಆ್ಯಪಲ್ ಕಂಪನಿ ಹೈ ಪ್ಯಾಡ್ ನ್ನು ಸಾಕ್ಷಿ ನೋಡಿ ಗುರುತಿಸಿದ್ದು ಮು.ಮಾ 10 ಎಂದು ಗುರುತಿಸಿಕೊಳ್ಳಲಾಯಿತು.

ಆರೋಪಿಗಳ ಪರವಾಗಿ ಶ್ರೀ ಡಿ.ಬಿ.ಡಿ ವಕೀಲರು ಹಾಜರಿದ್ದು ಪಾಟೀಸವಾಲು ಮಾಡುವುದಾಗಿ ಪ್ರಕರಣವನ್ನು ಇಡಿಸಿರುತ್ತಾರೆ.

<u>ಪಾಟೀ ಸವಾಲುಃ</u> ಶ್ರೀ ಎಂ.ಜಿ.ಪಿ. ವಕೀಲರಿಂದ

ನಾನು ಸ್ಥಳಕ್ಕೆ ಹೋದಾಗ ಸ್ಥಳದಲ್ಲಿ ಯಾವುದೇ ಪೊಲೀಸರು ಇರಲಿಲ್ಲ. ನಾನು ಸ್ಥಳಕ್ಕೆ ಹೋಗುವ ಪೂರ್ವದಲ್ಲಿ ಸಿಗರನಹಳ್ಳಿಯಲ್ಲಿ ದಲಿತರು ಮತ್ತು ಒಕ್ಕಲಿಗರ ನಡುವೆ ವೈಶಮ್ಯ ಇದೆ ಎಂದು ಗೊತ್ತಿತ್ತು. ನಾನು ಸ್ಥಳಕ್ಕೆ ಹೋಗುವ ಪೂರ್ವದಲ್ಲಿ ಪೊಲೀಸರ ರಕ್ಷಣೆಯನ್ನು ಪಡೆದುಕೊಂಡು ಹೋಗಲು ತೊಂದರೆ ಏನಾದರೂ ಇತ್ತಾ ಎಂದರೆ ಸಾಕ್ಷಿ ಸಿಗರನಹಳ್ಳಿ ಗ್ರಾಮದಲ್ಲಿ ಗಲಾಟೆಯಾದ ನಂತರ ಶಾಂತಿ ಸಭೆಗಳಾಗಿ ಎಲ್ಲಾ ಸಾರ್ವಜನಿಕರು ಶಾಂತಿಯಿಂದ ಇರುತ್ತೇವೆ ಎಂದು ಒಪ್ಪಿಗೆ ಕೊಟ್ಟಿದ್ದರಿಂದ ನಾವು ಪೊಲೀಸರ ರಕ್ಷಣೆಯನ್ನು ಪಡೆದುಕೊಂಡು ಗ್ರಾಮಕ್ಕೆ ಹೋಗಲಿಲ್ಲ. ನನ್ನ ಜೊತೆ ಹೊಳೆನರಸೀಪುರ ತಹಸೀಲ್ದಾರರು ಬಂದಿದ್ದರು ಎಂದರೆ ಸರಿ. ನಿ.ಪಿ. 1 ರಲ್ಲಿ ಹೊಳೆನರಸೀಪುರ ತಹಸೀಲ್ದಾರರು ಇದ್ದರು ಎಂದು ನಾನು ಹೇಳಿಲ್ಲ. ನಾನು ನಿ.ಪಿ. 1 ರಲ್ಲಿ ಹೇಳಿರುವ ಘಟನೆಗೆ ಹೊಳೆನರಸೀಪುರ ತಹಸೀಲ್ದಾರರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದರು ಎಂದರೆ ಸರಿ. ಹೊಳೆನರಸೀಪುರ ತಹಸೀಲ್ದಾರರಿಗೆ ಸಿಗರನಹಳ್ಳಿ ಗ್ರಾಮದಿಂದ ಪ್ರಕ್ಷುಬ್ದ ವಾತಾವರಣದ ಆಂತರಿಕ ಗುಪ್ತಚರ ವರದಿ ಇರುತ್ತದೆ ಎಂದರೆ ಸಾಕ್ಷಿ ಇರಬಹುದು ಎಂದರೆ ಹೇಳುತ್ತಾರೆ. ಸಿಗರನಹಳ್ಳಿ ಗ್ರಾಮದಲ್ಲಿ ನಾನು ಹೋಗುವ ಪೂರ್ವದಲ್ಲಿ ಏನೆಲ್ಲಾ ನಡೆದಿತ್ತು ಎಂದು ಎನ್ನುವ ವರದಿ ನನಗೆ ಗೊತ್ತಿತ್ತು ಎಂದರೆ ಸರಿ. ಆ ದಿನ ನನ್ನ ಜೊತೆ ಡೆಪ್ಯೂಟಿ ತಹಸೀಲ್ದಾರ ಹಳೇಕೋಟೆ ಹೋಬಳಿ, ರಾಜಸ್ವ ನಿರೀಕ್ಷಕರು, ಆ ವೃತ್ತದ ವಿ.ಎ, ಮತ್ತು ಹೊಳೆನರಸೀಪುರ ತಹಸೀಲ್ದಾರರು ನನ್ನ ಜೊತೆ ಬಂದಿದ್ದರು. ನಾನು ಪರಿಶೀಲನೆಗಾಗಿ ಭೇಟಿ ಕೊಡುವ ಪೂರ್ವದಲ್ಲಿ 2 ಬಾರಿ ಸಿಗರನಹಳ್ಳಿ ಗ್ರಾಮಕ್ಕೆ ಶಾಂತಿ ಸಭೆಗಳು ನಡೆಯುತ್ತಿರುವಾಗ ಭೇಟಿ ಕೊಟ್ಟಿದ್ದೇನೆ. ನಾನು ಸ್ಥಳಕ್ಕೆ ಆ ದಿನ ಹೋದಾಗ ಗ್ರಾಮದವರು 150 ರಿಂದ 200 ಜನರು ಇದ್ದರು ಎಂದರೆ ಸರಿ. ಅವರುಗಳೆಲ್ಲರೂ ಸವರ್ಣೀಯ ಜಾತಿಯವರು ದಲಿತರು ಗ್ರಾಮದಲ್ಲಿ ಇರಲಿಲ್ಲ. ನಾನು ಹೋದಾಗ ಸ್ಥಳದಲ್ಲಿದ್ದ ಗ್ರಾಮದ ಜನಗಳು ಸವರ್ಣೀಯ ಜಾತಿಗೆ ಸೇರಿದವರೆಂದು ನನಗೆ ಮೊದಲು ಗೊತ್ತಿರಲಿಲ್ಲ. ನನಗೆ ಆ ದಿನ ಸ್ಥಳದಲ್ಲಿದ್ದ 150 ರಿಂದ 200 ಜನಗಳ ಪೈಕಿ ಯಾರ್ಯಾರು ಹಲ್ಲೆ

ನಡೆಸಿದರು ಎಂದು ಖಚಿತವಾಗಿ ಹೇಳಲು ಆಗುವುದಿಲ್ಲ ಎಂದರೆ ಸರಿ. ನನ್ನ ಫಿರ್ಯಾದಿನಲ್ಲಿ ದೊಂಬಿ ಗಲಾಟೆಯನ್ನು ಯಾರ್ಯಾರು ನನ್ನ ವಿರುದ್ಧ ಮಾಡಿದ್ದಾರೆ ಎಂದು ಹೇಳಿಲ್ಲ ಎಂದರೆ ಸರಿಯಲ್ಲ. ನಿ.ಪಿ. 1 ರಲ್ಲಿ ಹೇಳಿರುವ ಹೆಸರುಗಳನ್ನು ನನ್ನ ಹೈ ಪ್ಯಾಡ್ ಕಾಣುತ್ತಿಲ್ಲ ಎಂದು ಪೊಲೀಸರಿಗೆ ಹೇಳಿದಾಗ ಪೊಲೀಸರು ಸ್ಥಳದಲ್ಲಿದ್ದವರನ್ನು ವಿಚಾರಿಸಿದಾಗ ಅವರುಗಳು ಹೆಸರುಗಳನ್ನು ಪೊಲೀಸರು ನನಗೆ ಹೇಳಿರುತ್ತಾರೆ. ನನ್ನ ಹೈ ಪ್ಯಾಡ್ ನ್ನು ಕಿತ್ತುಕೊಂಡ ಸಂದರ್ಭದಲ್ಲಿ ಸುಮಾರು 150 ಜನರು ಸ್ಥಳದಲ್ಲಿ ಇದ್ದರು. ನಾನು ಸ್ಥಳಕ್ಕೆ ಹೋದ ನಂತರ ಸ್ಥಳದಲ್ಲಿ ಮಾತುಕತೆ ನಡೆಯುತ್ತಿದ್ದುದರಿಂದ ನಾನೇ ಪೊಲೀಸರಿಗೆ ಫೋನ್ ಮಾಡಿ ಸ್ಥಳಕ್ಕೆ ಕರೆಸಿದೆನು. ಘಟನೆಯು ಸುಮಾರು 4 ಗಂಟೆ ನಡೆಯಿತು. ನಾನು ಪೊಲೀಸರಿಗೆ ಫೋನ್ ಮಾಡಿ 20 ನಿಮಿಷದ ನಂತರ ಪೊಲೀಸರು ಸ್ಥಳಕ್ಕೆ ಬಂದರು. ನನ್ನ ಹೈ ಪ್ಯಾಡ್ ನ್ನು ಕಿತ್ತುಕೊಂಡು ನನ್ನ ಮೇಲೆ ಹಲ್ಲೆ ಮಾಡಿದಾಗ ಆ ಸಂದರ್ಭದಲ್ಲಿ ಪೊಲೀಸರು ಸ್ಥಳದಲ್ಲಿಯೇ ಇದ್ದರು. ಪೊಲೀಸರು ಗಲಾಟೆಯನ್ನು ಬಿಡಿಸಲು ಕಾನೂನು ಸುವ್ಯವಸ್ಥೆಯನ್ನು ಕಾಪಾಡಲು ಪ್ರಯತ್ನ ಮಾಡಿದರು. ಘಟನೆ ನಡೆದಾಗ ಪಿ.ಎಸ್.ಐ, ಸಿ.ಪಿ.ಐ, ಎ.ಎಸ್.ಪಿ ಇದ್ದರು ನಂತರ ಎಸ್.ಪಿ ಬಂದರು. ನಿ.ಪಿ. 1 ರಲ್ಲಿ ನಾನು ಈಗ ಮೇಲೆ ಹೇಳಿರುವ ಪೊಲೀಸ್ ಅಧಿಕಾರಿಗಳೆಲ್ಲರೂ ನನ್ನ ಮೇಲೆ ನಾನು ಹೇಳುತ್ತಿರುವ ಘಟನೆ ನಡೆಯುತ್ತಿರುವಾಗ ಪ್ರತ್ಯಕ್ಷ ಸಾಕ್ಷಿದಾರರಾಗಿ ಇದ್ದರು ಎಂದು ನಾನು ಹೇಳಿಲ್ಲ. ಈ ಘಟನೆ ಆಗುವ ಪೂರ್ವದಲ್ಲಿ ಸಿಗರನಹಳ್ಳಿಯ ಸವರ್ಣೀಯರ ಮೇಲೆ ಪೊಲೀಸರು ಪ್ರಕರಣ ದಾಖಲಿಸಿದ್ದ ವಿಚಾರ ನನಗೆ ಗೊತ್ತಿಲ್ಲ. ನನ್ನ ಹೈ ಪ್ಯಾಡ್ ಅದೇ ದಿನ ಸಂಜೆ 8.30 ಗಂಟೆಗೆ ಪತ್ತೆಯಾಗಿರುತ್ತದೆ. ನಿ.ಪಿ. 1 ನ್ನು ಗಲಾಟೆಯಾದ ದಿನ ರಾತ್ರಿ ಸುಮಾರು 9.30 ಗಂಟೆಗೆ ಪೊಲೀಸರಿಗೆ ಕೊಟ್ಟಿದ್ದೇನೆ. ನಿ.ಪಿ. 1 ನ್ನು ಹಾಸನದದ ಎ.ಸಿ. ಕಚೇರಿಯಲ್ಲಿ ಬರೆದರು. ನಿ.ಪಿ. 1 ನ್ನು ಬರೆಯುವಾಗ ನಿ.ಪಿ. 1 ರಲ್ಲಿ ಪ್ರಸ್ತಾಪಿಸಿರುವ ಆರೋಪಿಗಳ ಹೆಸರುಗಳನ್ನು ಪೊಲೀಸರು ನನಗೆ ಹಾಸನದ ಎ.ಸಿ. ಕಚೇರಿಯಲ್ಲಿ ಹೇಳಿದ್ದಾರೆ. ನಿ.ಪಿ. 1 ರಲ್ಲಿ ನನ್ನ ಹೈ ಪ್ಯಾಡ್ ಕಳೆದು ಹೋಗಿದೆ ಎಂದು ಕೊಟ್ಟಿದ್ದೇನೆ. ಪತ್ತೆ ಆಗಿರುವುದಿಲ್ಲ ಎಂದು ನಿ.ಪಿ. 1 ನ್ನು ನಾನು ಕೊಟ್ಟಿಲ್ಲ. ಹೈ ಪ್ಯಾಡ್ ನಮ್ಮ ಇಲಾಖೆಯಿಂದ ಕೊಟ್ಟಿಲ್ಲ ಅದು ನನ್ನ ಸ್ವಂತದ ಉಪಕರಣ. ಮು.ಮಾ 10 ನ್ನು ಘಟನೆಯಲ್ಲಿ ಕಳೆದು ಹೋದ ನಂತರ ಇಂದೇ ಪ್ರಥಮವಾಗಿ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿ. ಮು.ಮಾ 10 ನ್ನು ನಾನು ನ್ಯಾಯಾಲಯದಿಂದ ಇಲ್ಲಿಯವರೆಗೂ ಬಿಡಿಸಿಕೊಂಡಿಲ್ಲ ಎಂದರೆ ಸರಿ. ನಾನು ಆ ದಿನ ಸಿಗರನಹಳ್ಳಿ ಗ್ರಾಮಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಸಿಗರನಹಳ್ಳಿ ಗ್ರಾಮದ ಸವರ್ಣೀಯರಿಗೆ ತೊಂದರೆ ಕೊಡಬೇಕೆಂದು ದೂರನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಮು.ಮಾ. 10 ಕ್ಕೂ ಮತ್ತು ನನಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆದ್ದರಿಂದ ನಾನು ಮು.ಮಾ 10 ನ್ನು ನ್ಯಾಯಾಲಯದಿಂದ

ಬಿಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ.

ಜೆ.ಎಂ.ಎಫ್.ಸಿ, ಹೊಳೆನರಸೀಪುರ.